


ಎಡದಿಂದ ಬಲಕ್ಕೆ :

1. ಮಂಜು ಸುರಿವ ಪ್ರದೇಶಕ್ಕೆ ಈಗ ಹೋಗದಿರುವುದೇ ಸೂಕ್ತ (4)
3. ಮಧುರವಾದದ್ದು ಸ್ವಲ್ಪ ಹಿಂದು ಮುಂದಾದರೂ ಮೃದು ಸ್ವಭಾವದ್ದಾದೀತು (3)
4. ಆ ಕಚೇರಿಯಲ್ಲಿ ನಡೆದ ಚರ್ಚೆ ಬಹಳ ಹಿತಕರವಾಗಿತ್ತು (3)
6. ಅಲ್ಲಿನ ಗ್ಯಾರೇಜಿನ ಮಾಲೀಕನ ಹೆಸರು 'ದುಡ್ಡಿನ ಅರಸ'! (4)
7. ಪರಿಚಾರಕರ ಕೆಲಸಕ್ಕೂ ಬೇಕೇ ಬೇಕು ನಾನಾ ಸಲಕರಣೆ (4)
9. ಪ್ರಸಿದ್ಧರ ಬಗ್ಗೆ ಕೆಟ್ಟ ಸುದ್ದಿ ಹರಡಿದವರ ಹೆಸರನ್ನು ಬಹಿರಂಗಪಡಿಸು (4)
11. ಅವನ ಕಾರ್ಯ ರೀತಿ ನಿತ್ಯವೂ ವಿಭಿನ್ನವಾಗಿ ಹೊಸ ಹೊಸದು (4)
13. ಆತನ ಪರಮಾಪ್ತ ವ್ಯಕ್ತಿ ಲಕ್ಷ್ಮಿಯ ಗಂಡ (4)
15. ಅಂಥ ದುಷ್ಟನನ್ನು ಬುಸುಗುಡುತ್ತ ಓಡುವಂತೆ ಮಾಡಿದ್ದು ಪಾರ್ವತಿಯ ಮಗ ತಾನೇ ? (4)
17. ಕುಸುಮಗಳನ್ನು ವೀಕ್ಷಿಸಲು ಮುಂಜಾನೆಯೇ ಸರಿ (3)
18. ರಾಜನಿಗೂ ಉಲ್ಲಾಸ ತಂದ ಸಂಗೀತ ರಾಗ (3)
19. ರಮೇಶನ ಮಗನ ಓಟದ್ದು 'ಬಾಣದಷ್ಟು ಬೇಗ' (4)

ಮೇಲಿಂದ ಕೆಳಕ್ಕೆ :

1. ಮನಸ್ಸಿನಲ್ಲಿ ಏನೇ ಇರಲಿ, ಮೇಲ್ನೋಟಕ್ಕೆ ಕಿಂಚಿತ್ತೂ ವ್ಯತ್ಯಾಸ ಇಲ್ಲ (3)
2. ಸ್ವರಜತಿಗಳನ್ನು ಅದ್ಭುತವಾಗಿ ಹಾಡಿದ್ದಕ್ಕೆ ಬಹುಮಾನ ಈ ತಾವರೆ (4)
3. ಮಾಣಿಕ್ಯದ ಆಭರಣಗಳನ್ನು ಮಾರುವವನೂ ವ್ಯಾಪಾರಿ ತಾನೇ ? (3)
5. ಕಾಣಿಕೆಗಳ ರಾಶಿಯಲ್ಲಿ ಚಿನ್ನವೂ ಇದೆ (3)
7. ಭಾರೀ ವಿಪ್ಲವದ ನಡುವೆಯೂ ಮೂಡಿತು ಚಿಗುರು (3)
8. ಸೇಬಿನ ರಸದ ಸವಿ ಅನುಭವಿಸಲು ಬೇಕು ಈ ಇಂದ್ರಿಯ (3)
9. ಪರರ ಹಾರ ಕದಿಯ ಹೋದದ್ದಕ್ಕೆ ಬಡಿತ, ಏಟು (3)
10. 'ಒಳ್ಳೆಯ ಬುದ್ಧಿ'. ಅದೇ ಆಕೆಯ ಹೆಸರು ಕೂಡ (3)
12. ಸರಿಯಲ್ಲದ್ದನ್ನು ಮಾಡಿದ ನಂತರ ಭಾರೀ ದುಃಖ, ಸಂಕಟ (3)
14. ಮಂದ್ರ ನಿಷಾದ ಸ್ವರವೇ ಮತ್ತೆ ಮತ್ತೆ ಕೇಳಿಸಿತೇ? (3)
15. ಅಂಕೆ ಶಂಕೆ ಇಲ್ಲದ ಆಸೆಗಳಿಗೆ ನಿಯಂತ್ರಣ ಇರಲಿ (3)
16. ತುಂಗಾ ತೀರದಲ್ಲಿ ಜನರ ಧ್ವನಿಯ ಅಲೆ ಅಲೆ (3)

### 19-10-2017ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂದೇಹ 3. ಪ್ರಭಾತ 4. ಸಿಡಿತ 6. ನಿರಶನ 7. ಹುಡುಕಾಟ 9. ರಹದಾರಿ 11. ಮಿತಿಮೀರು 15. ವಸನ 16. ನರ್ತಕ 17. ವಿಧಾನ

ಮೇಲಿಂದ ಕೆಳಕ್ಕೆ :

1. ಸಂತತ 2. ಹಸಿರು 3. ಪ್ರದೇಶ 5. ತಗಡು 6. ನಿರ್ಧಾರ 8.ಟಗರು 10.ದಾನವ 12. ತಿರುಕ 13. ಮನವಿ 14. ಕಾನನ

# ಮತ್ಸ್ಯಗಳು ಗುಂಪು ಗುಂಪಾಗಿಯೇ ಏಕೆ?

ಅದು ಮತ್ಸ್ಯಗಳ ಕ್ಷೇಮದ ಬದುಕಿಗೆ ಅತ್ಯಗತ್ಯವಾದ, ನಿಸರ್ಗ ಯೋಜಿತವೇ ಆದ ಒಂದು ಅದ್ಭುತ ಜೀವನ ತಂತ್ರ. ವಾಸ್ತವ ಏನೆಂದರೆ, ಈಗಿನ ಒಟ್ಟು ಸುಮಾರು 20,000 ಪ್ರಭೇದಗಳ ಪೈಕಿ 25% ರಷ್ಟು ಪ್ರಭೇದಗಳು ಜೀವನಪೂರ್ತಿ ಶಾಶ್ವತವಾಗಿ ಮತ್ತು 50% ರಷ್ಟು ಪ್ರಭೇದಗಳು ನಿರ್ದಿಷ್ಟ ಅವಧಿಗಳಲ್ಲಿ ಗುಂಪುಗೂಡಿಯೇ ಬದುಕುತ್ತವೆ. ನದಿ, ಸರೋವರ, ಕಡಲುಗಳ ಎಲ್ಲೆಡೆಯೂ ಈ ಕ್ರಮ ಅನುಸರಿಸುವ ಪ್ರತಿ ಮತ್ಸ್ಯ ಸಮೂಹದ ಸದಸ್ಯರ ಸಂಖ್ಯೆ ಕೆಲವೇ ನೂರರಷ್ಟು ಅಲ್ಪದಿಂದ ಮಿಲಿಯಾಂತರದವರೆಗೆ ಕಲ್ಪನಾತೀತ ( ಚಿತ್ರಗಳಲ್ಲಿ ಗಮನಿಸಿ ) ! ವಿಸ್ಮಯ ಏನೆಂದರೆ, ಕೆಲ ಪ್ರಭೇದಗಳ ಮತ್ಸ್ಯ ಸಮೂಹಗಳದು ಇಡೀ ಪ್ರಾಣಿ ಲೋಕದಲ್ಲೇ ಗರಿಷ್ಠ ಜನಸಂಖ್ಯೆಯ ವಿಶ್ವ ದಾಖಲೆ. ಉದಾಹರಣೆಗೆ 'ಹೆರಿಂಗ್' ಮೀನುಗಳ ಪ್ರತಿ ಗುಂಪಿನ 'ಜನ ಸಂಖ್ಯೆ' ಒಂದು ಕೋಟಿಯನ್ನೂ ಮೀರುತ್ತದೆ ; ಅಂಥ ಗುಂಪು ಹತ್ತಾರು ಚದರ ಕಿಲೋ ಮೀಟರ್ ವೈಶಾಲ್ಯಕ್ಕೆ ಒತ್ತಾಗಿ ಹರಡಿರುತ್ತದೆ ! ಮತ್ಸ್ಯ ಸಮೂಹಗಳ ಚಲನ ವಲನಗಳೂ ಬಹಳ ವಿಸ್ಮಯಕರ : ಒಟ್ಟಾಗಿ ವೇಗವಾಗಿ ಮೇಲೇರುತ್ತ, ಇಳಿಯುತ್ತ, ಅತ್ತಿತ್ತ ಅಡ್ಡಾಡುತ್ತ, ಗಿರಿಗಿರಿ ಸುತ್ತುತ್ತ, ಸರಸರ ದಿಕ್ಕು ಬದಲಿಸುತ್ತ... ಹಾಗೆಲ್ಲ. ಅದು ನಿಸರ್ಗದ ಒಂದು ಪರಮ ವಿಸ್ಮಯದ ದೃಶ್ಯ.




ಮತ್ಸ್ಯಗಳು ಹೀಗೆ ಗುಂಪುಗಳಲ್ಲೇ ಇರಲು ತುಂಬ ಮಹತ್ವದ ಕೆಲವು ಕಾರಣಗಳಿವೆ. ಪ್ರಮುಖವಾಗಿ :

* ಬೇಟೆಗಾರ ಶತ್ರುಗಳಿಂದ ರಕ್ಷಣೆ ಗುಂಪು ಜೀವನದಿಂದ ಲಭಿಸುವ ಬಹು ದೊಡ್ಡ ಪ್ರಯೋಜನ. ಸಾವಿರಾರು, ಲಕ್ಷಾಂತರ ಸಂಖ್ಯೆಯಲ್ಲಿ, ಚಿತ್ರವಿಚಿತ್ರ ವ್ಯೂಹಗಳೋಪಾದಿಯಲ್ಲಿ, ವೇಗವಾಗಿ ಚಲನಶೀಲವಾದ ಬೃಹತ್ ಗುಂಪುಗಳು ಬೇಟೆಗಾರರ ದೃಷ್ಟಿಯನ್ನು ಗಲಿಬಿಲಿಗೊಳಿಸುತ್ತವೆ ; ಗುರಿ ಇಡಲು ಕಷ್ಟವಾಗುವಂತೆ, ಧಾಳಿ ಮಾಡಲು ಹೆದರುವಂತೆ ಭ್ರಮೆಗೊಳಿಸುತ್ತವೆ. ಬೇಟೆಗಾರರು ಎರಗಿದರೂ ಅವುಗಳ ಪ್ರಯತ್ನ ಸಫಲವಾಗುವ ಸಾಧ್ಯತೆ ತುಂಬ ಕಡಿಮೆ. ಹಾಗಾಗಿ ಮತ್ಸ್ಯಗಳು ಬಹುಮಟ್ಟಿಗೆ ಸುರಕ್ಷಿತ.

* ಗುಂಪುಗಳಲ್ಲಿದ್ದರೆ ಆಹಾರಾನ್ವೇಷಣೆ ಸುಲಭ. ಪ್ರತಿ ಮೀನೂ ಒಂಟಿಯಾಗಿ ಆಹಾರ ಹುಡುಕುತ್ತ ಅಲೆದಾಡುವುದಕ್ಕಿಂತ ನೂರಾರು, ಸಾವಿರಾರು ಕಣ್ಣುಗಳು ಒಟ್ಟಾಗಿ ಹುಡುಕುವಾಗ ಯಶಸ್ಸು ಅತ್ಯಧಿಕ. ಇದು ಗುಂಪು ಜೀವನದ ಮತ್ತೊಂದು ಮುಖ್ಯ ಉಪಯೋಗ. ಶತ್ರುಗಳೂ ದೂರ ಉಳಿಯುವುದರಿಂದ ಗಳಿಸಿದ ಆಹಾರದ ಸೇವನೆಯೂ ನಿರಾತಂಕ.

* ಭಾರೀ ಗುಂಪುಗಳಲ್ಲಿ ಒಟ್ಟಾಗಿರುವ ಮತ್ಸ್ಯಗಳಿಗೆ 'ಮಾನಸಿಕ ಒತ್ತಡ' ತುಂಬ ಕಡಿಮೆ. ಆಹಾರ ಗಳಿಕೆಯ, ಸ್ವರಕ್ಷಣೆಯ, ಬಹು ದೂರದ ವಲಸೆ ಪಯಣದ,....ಇಂಥವೆಲ್ಲ ಸಂದರ್ಭಗಳಲ್ಲೂ ಅವಕ್ಕೆ 'ಸುರಕ್ಷಾ ಭಾವ' ಲಭ್ಯ. ಜೊತೆಗೆ, ಬೃಹತ್ ಸಮೂಹಗಳಲ್ಲಿರುವ ಮತ್ಸ್ಯಗಳಿಗೆ ಸಂತಾನ ವರ್ಧನೆಗೆ ಸಂಗಾತಿಯನ್ನು ಪಡೆಯುವುದೂ ಸ್ಪಷ್ಟವಾಗಿಯೇ ಬಹಳ ಸುಲಭ ತಾನೇ ? ಇವೆಲ್ಲ ಜೀವನಾವಶ್ಯಕ ಲಾಭಗಳಿಗಾಗಿ ಮತ್ಸ್ಯಗಳು ಗುಂಪು ಗುಂಪಾಗಿಯೇ ಇರುತ್ತವೆ.

■ ಎನ್. ವಾಸುದೇವ್